ವಿಷಯ: ರಾಜ್ಯ ಮಾರ್ಗಗಳನ್ನು ರಾಷ್ಟ್ರೀಯ ಹೆದ್ದಾರಿಗಳ ಗುಣಮಟ್ಟಕ್ಕೆ ವಿಸ್ತರಿಸುವುದು

2745 (4063)

ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರತಕ್ಕ ಎಷ್ಟು ರಾಜ್ಯ ಮಾರ್ಗಗಳನ್ನು ರಾಷ್ಟ್ರೀಯ ಹೆದ್ದಾರಿಗಳ ಗುಣ ಮಟ್ಟಕ್ಕೆ ವಿಸ್ತರಿಸಲಾಗುವುದು?

ಆ) ಅವುಗಳು ಯಾವುವು; ಅವುಗಳ ಒಟ್ಟು ಕಿಮೀ. ಎಷ್ಟು? ಇದಕ್ಕಾಗಿ ತಗಲಬಹುದಾದ ಅಂದಾಜು ವೆಚ್ಚ ಎಷ್ಟು?

ಇ) ಸದರಿ ಹಣ ಕ್ರೋಢೀಕರಣಕ್ಕಾಗಿ ಸರ್ಕಾರ ಕೈಕೊಂಡ ಕ್ರಮಗಳೇನು? ಈ ಕಾಮಗಾರಿಗಳು ಎಂದಿನಿಂದ ಪ್ರಾರಂಭವಾಗುವುವು? (ವಿವರಗಳನ್ನು ಒದಗಿಸುವುದು)

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಪ್ರಸ್ತಾವನೆಯಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಿಷಯ: ರಸ್ತೆಗಳ ಅಭಿವೃದ್ಧಿ ಯೋಜನೆ.

2746 (4062)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ 2500 ಕಿಮೀ.ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ಯೋಜನೆ ಸರ್ಕಾರದ ಮುಂದೆ ಇರುವುದು ನಿಜವೆ?

ಆ) ಹಾಗಿದ್ದಲ್ಲಿ ಈ ಯೋಜನೆಗೆ ತಗಲಬಹುದಾದ ಅಂದಾಜು ವೆಚ್ಚ ಎಷ್ಟು? ಯಾವ ನೆರವಿನಿಂದ ಈ ರಸ್ತೆಗಳ ಅಭಿವೃದ್ಧಿ ಮಾಡಲಾಗುವುದು?

ಇ) ಈ ಯೋಜನೆಯಲ್ಲಿ ಆಳವಡಿಸಿಕೊಳ್ಳಲಾಗುವ ರಸ್ತೆಗಳು ಯಾವುವು;

(ಪ್ರತಿಯೊಂದು ರಸ್ತೆಗಳ ವಿವರ ಒದಗಿಸುವುದು);

ಈ) ಎಂದಿನಿಂದ ಈ ಯೋಜನೆ ಜಾರಿಗೆ ಬರುವುದು;

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ವಿಷಯ: ವಿದ್ಯಾನಗರದ ಕ್ರೀಡಾ ತರಬೇತಿ ಮತ್ತು ವಸತಿ ಶಾಲೆಗೆ ಸೌಲಭ್ಯಗಳ ಕೊರತೆ.

2747 (3326)

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯಾನಗರದಲ್ಲಿ ಕ್ರೀಡಾ ತರಬೇತಿ ಹಾಗೂ ವಸತಿ ಶಾಲೆ ಇದೆಯೇ? ಇಲ್ಲಿ ದೇವರಾಜ ಅರಸರ ಕ್ರೀಡಾಭಿವೃದ್ಧಿ ಸಂಸ್ಥೆ ಮತ್ತು ಯುವಜನ ಸೇವಾ ತರಬೇತಿ ಕಾರ್ಯಕ್ರಮಗಳು ನಡೆಯುತ್ತವೆಯೇ?

ಆ) ವಿದ್ಯಾನಗರ ಪರಿಸರ ಉಳಿಸಲು ಇಲಾಖೆ ಕೈಗೊಂಡಿರುವ ಕಾರ್ಯಕ್ರಮಗಳೇನು? ಹಾಗೂ ಅದನ್ನು ತಡೆಗಟ್ಟಲಾಗಿದೆಯೇ? ಹಾಗಿಲ್ಲದಿದ್ದಲ್ಲಿ ಕಾರಣವೇನು?

ಇ) ವಿದ್ಯಾನಗರ ಉಳಿಸಲು, ಕ್ರೀಡಾನಗರ ಬೆಳೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? ಹಾಗಿದ್ದಲ್ಲಿ ಜಲ್ಲಿ ಪೌಂಡರ್‌ನಿಂದ ಪರಿಸರ ಉಳಿಸಿ, ನೀರಿನ ಸೌಲಭ್ಯ ಕಲ್ಪಿಸಿ ಕ್ರೀಡಾನಗರ ಬೆಳಸಲಾಗುವುದೇ?

ಈ) ಹಾಗಿದ್ದಲ್ಲಿ ಯುವಜನ ತರಬೇತಿ ಕಾರ್ಯಕ್ರಮಗಳನ್ನು ವಿದ್ಯಾನಗರದಲ್ಲಿ ಕೈಬಿಟ್ಟು ಕುಂಬಳಗೋಡಿನಲ್ಲಿ ಪ್ರತ್ಯೇಕ ಯುವಜನ ತರಬೇತಿ ಕೇಂದ್ರ ಇರುವುದರಿಂದ, ವಾಹನ ಸಂಚಾರ ವಿದ್ಯುತ್ ವಿಶಾಲ ಜಾಗ ಹಾಗೂ ನೀರಿನ ಸೌಕರ್ಯವಿರುವುದರಿಂದ ಇಲ್ಲಿ ಪ್ರಾರಂಭಿಸಿ ತರಬೇತಿ ನೀಡಲು ಸರ್ಕಾರದ ಕ್ರಮವೇನು?